# ಹನುಮಾನ್‌ಗುಂಡಿ!



■ ಚಿತ್ರ ಬರಹ:
**ಮಹೇಶ ಕೆ.**

'ಜಲಪಾತಗಳ ತವರು' ಪಶ್ಚಿಮ ಘಟ್ಟದಲ್ಲಿ ಜುಳುಜುಳನೆ ಹರಿವ ತೊರೆಗಳ ನಿನಾದ, ಕ್ರಿಮಿ – ಕೀಟ, ದುಂಬಿಗಳ ಝೇಂಕಾರ, ಮೈನವಿರೇಳಿಸುವ ತಂಪಾದ ವಾತಾವರಣ, ವನಸುಮಗಳ ಸುಗಂಧ! ನಿತ್ಯಹರಿದ್ವರ್ಣದ ಕಾಡಿನಲ್ಲಿ ಮುಗಿಲು ಚುಂಬಿಸುವ ಘಟ್ಟಗಳು, ಮಂಜು ಮುಸುಕಿರುವ ರಮ್ಯ ದೃಶ್ಯ. ಆಕಾಶದೆತ್ತರಕ್ಕೆ ಬೆಳೆದುನಿಂತ ಮರಗಳ ಮಧ್ಯೆ ತಿರುವು ಮುರುವಿನ ಡಾಮರು ರಸ್ತೆಯಲ್ಲಿ ನಡೆದಾಡುವುದೇ ರೋಮಾಂಚಕ ಅನುಭವ. ಪಶ್ಚಿಮ ಘಟ್ಟದ ಈ ಸೊಬಗಿನ ನಡುವೆ ಕಣ್ಮನ ಮುದಗೊಳಿಸುವ ರಮಣೀಯ ಜಲಧಾರೆಯೇ ಹನುಮಾನ್‌ಗುಂಡಿ ಜಲಪಾತ.

ಕಾರ್ಕಳದ ಬಜಗೋಳಿಯಿಂದ ಅರಣ್ಯ ಇಲಾಖೆಯವರ ಕಡ್ಡಾಯ ಒಪ್ಪಿಗೆ ಪಡೆದು (ಮೀಸಲು ಅರಣ್ಯ ಪ್ರದೇಶವಿದು) ಕುದುರೆಮುಖ ಮಾರ್ಗವಾಗಿ ಎಸ್‌ಕೆ ಬಾರ್ಡರ್ (ಸೌತ್ ಕೆನರಾ ಬಾರ್ಡರ್) ಮೂಲಕ ನೇರ ಮುಂದಕ್ಕೆ ಸಾಗಬೇಕು. ದಟ್ಟ ಅರಣ್ಯದ ಮಧ್ಯೆ ಸ್ವಲ್ಪ ದೂರ ಸಾಗಿದರೆ ರಸ್ತೆಯ ಎಡಬದಿಯಲ್ಲಿ ಹನುಮಾನ್ ಗುಂಡಿ ಜಲಪಾತದ ಸದ್ದು ಕೇಳಿಸುತ್ತದೆ. ಅಲ್ಲಿರುವ ಅರಣ್ಯ ಇಲಾಖೆಯವರ ಟಿಕೆಟ್ ಕೌಂಟರ್‌ನಲ್ಲಿ ಮೊದಲು ಟಿಕೆಟ್ ಖರೀದಿಸಬೇಕು. (ವಯಸ್ಕರಿಗೆ ರೂ.20, ಮಕ್ಕಳಿಗೆ ರೂ.10, ಶಾಲಾಮಕ್ಕಳಿಗೆ ವಿಶೇಷ ರಿಯಾಯ್ತಿ ಇದೆ.) ಅರಣ್ಯ ಇಲಾಖೆಯವರೇ ನಿರ್ಮಿಸಿರುವ ಸಿಮೆಂಟಿನ ಸುಮಾರು 300 ಮೆಟ್ಟಿಲುಗಳ ಮೂಲಕ ಇಳಿಯುತ್ತಿದ್ದಂತೆಯೇ ಹಾಲಿನ ಹೊಳೆಯಂತೆ 22 ಮೀಟರ್ ಎತ್ತರದಿಂದ ಧುಮುಕುವ ನಯನ ಮನೋಹರ ಜಲಪಾತ ಕಾಣಸಿಗುತ್ತದೆ. ಕಾರ್ಕಳದಿಂದ ಹನುಮಾನ್ ಗುಂಡಿಗೆ 35 ಕಿ. ಮೀ. ದೂರವಿದ್ದರೆ, ಕುದುರೆಮುಖದಿಂದ ಹನುಮಾನ್ ಗುಂಡಿಗೆ ಕೇವಲ 18 ಕಿ. ಮೀ. ದೂರ.

ಹಾಗೆ ನೋಡಿದರೆ 'ಹನುಮಾನ್‌ಗುಂಡಿ' ಎನ್ನುವುದು ಜಲಪಾತದ ಹೆಸರಲ್ಲ; ಅದು ಜಲಪಾತ ಇರುವ ಜಾಗದ ಹೆಸರು. ಈ ಜಲಪಾತವನ್ನು 'ಸೂತನಬ್ಬಿ' ಎಂದು ಕರೆಯುತ್ತಾರೆ. ಆದರೆ ಜನಬಳಕೆಯಲ್ಲಿ 'ಹನುಮಾನ್‌ಗುಂಡಿ ಜಲಪಾತ' ಎಂದೇ ಪ್ರಸಿದ್ಧಿ. ಪಶ್ಚಿಮ ಘಟ್ಟದಲ್ಲಿ ಬಹುದೂರದವರೆಗೆ ಸುತ್ತಿಕೊಂಡು ಹರಿದು ಈ ಜಲಪಾತ ಸೃಷ್ಟಿಯಾಗುವುದರಿಂದ ಇದಕ್ಕೆ 'ಸೂತನಬ್ಬಿ' ಎಂಬ ಹೆಸರು ಬಂದಿದೆಯಂತೆ. ಹನುಮಾನ್‌ಗುಂಡಿ ಎಂಬ ಹೆಸರಿನ ಬಗ್ಗೆ ಸ್ಥಳೀಯರು ಐತಿಹ್ಯವೊಂದನ್ನೂ ಹೇಳುತ್ತಾರೆ. 'ಹಿಂದೆ ಹನುಮಂತನು ಈ ದಾರಿಯಾಗಿ ಹಾರಿ ಹೋಗುವಾಗ ಇಲ್ಲಿ ತನ್ನ ಕಾಲನ್ನು ಇರಿಸಿದ್ದ. ಇದರಿಂದ ಗುಂಡಿ ಸೃಷ್ಟಿಯಾಗಿದೆ. ಹಾಗಾಗಿ ಈ ಹೆಸರು ಬಂದಿದೆ' ಎನ್ನುವುದು ಸ್ಥಳೀಯರ ಮಾತು.

ಎಸ್‌ಕೆ ಬಾರ್ಡರ್ ಒಂದು ಗಡಿ ಪ್ರದೇಶ. ಗಡಿಯ ಮೇಲೆ ಮತ್ತು ಕೆಳಕ್ಕೆ ಓಡಾಡುವಾಗ ಹವಾಮಾನ ವ್ಯತ್ಯಾಸ ಸ್ಪಷ್ಟವಾಗಿ ಗೊತ್ತಾಗುತ್ತದೆ. ಎಸ್‌ಕೆ ಬಾರ್ಡರ್‌ನಿಂದ ಕೆಳಭಾಗದಲ್ಲಿ ಉಡುಪಿ ಜಿಲ್ಲೆಯಿದ್ದು ಕರಾವಳಿಯ ಬಿಸಿ ವಾತಾವರಣವಿರುತ್ತದೆ. ಮೇಲ್ಭಾಗದಲ್ಲಿ ಕುದುರೆಮುಖದಲ್ಲಿ ಇರುವಂತೆ ತಂಪಾದ ವಾತಾವರಣ! ಎಸ್‌ಕೆ ಬಾರ್ಡರ್‌ನಲ್ಲಿ ಸ್ವಲ್ಪ ಹೊತ್ತು ವಾಹನ ನಿಲ್ಲಿಸಿ ಹೊರಟರೆ ಹವಾಮಾನಕ್ಕೆ ದೇಹ ಹೊಂದಿಕೊಂಡಂತೆಯೂ ಆಗುತ್ತದೆ.

ಹನುಮಾನ್ ಗುಂಡಿಯ ಸುತ್ತಲೂ ದಟ್ಟ ಅರಣ್ಯ ಇರುವುದರಿಂದ ಮಳೆಗಾಲದಲ್ಲಿ ಅಲ್ಲಿಗೆ ತೆರಳುವುದು ಸ್ವಲ್ಪ ಕಷ್ಟ. ಮಳೆಗಾಲದಲ್ಲಿ ಜಿಗಣೆ ಕಾಟ ವಿಪರೀತ. ಮಳೆ ಜೋರಾಗಿ ಬೀಳುವುದರಿಂದ ಮೆಟ್ಟಿಲುಗಳಲ್ಲಿ ಹಾವಸೆ ಕಟ್ಟಿ ಜಾರುವ ಅಪಾಯವಿದೆ. ಜಲಪಾತ ವೀಕ್ಷಣೆಗೆ ಪ್ರತಿದಿನ ಬೆಳಗ್ಗೆ 9ರಿಂದ ಸಂಜೆ 5ಗಂಟೆವರೆಗೆ ಮಾತ್ರ ಅವಕಾಶವಿದೆ.